**ಓ ಎಸ್ ನಂಃ 170/20**
**ಪಿ ಡಬ್ಲ್ಯೂ ಃ 1**

**ದಿಃ 24.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಸಿ ಕೆ ಆರ್ ವಕೀಲರಿಂದಃ-**

ನೇತೇನಹಳ್ಳಿ ಗ್ರಾಮದ ಸರ್ವೆ ನಂ 160ರಲ್ಲಿ 2 ಗುಂಟೆ ಜಮೀನಿಗೆ ಸಂಬಂದಪಟ್ಟಂತೆ ಎಂ ಆರ್ ನಂ.11/89-90ರಂತೆ ಪ್ರತಿವಾದಿಯ ತಂದೆಯಾದ ಕುನ್ನಯ್ಯರವರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ದಾವಾ ಹೂಡುವ ಸಮಯದಲ್ಲಿ ಸದರಿ ಜಮೀನಿನ ಖಾತೆಯು ಯಾರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯು ಕುನ್ನಯ್ಯರವರ ಹೆಸರಿನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿಗೆ ತಾವು ತೊಂದರೆ ನೀಡುತ್ತಿರುವ ಕಾರಣ ಪ್ರತಿವಾದಿ ತಮ್ಮ ವಿರುದ್ದ ದಿನಾಂಕಃ 22-06-2020ರಲ್ಲಿ ಒಂದು ಪೋಲಿಸ್ ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ತಮ್ಮ ವಿರುದ್ದ ದೂರನ್ನು ನೀಡಿದ್ದು ಸದರಿ ವಿಚಾರವಾಗಿ ಪೋಲಿಸರು ತಮ್ಮನ್ನು ಪೋಲಿಸ್ ಠಾಣೆಗೆ ಕರೆಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 3 ರ ಪ್ರಕಾರ ಗಂಗಾಧರಯ್ಯ ಬಿನ್ ಕುನ್ನಯ್ಯರವರ ಹೆಸರಿನಲ್ಲಿ 2 ಗುಂಟೆ ಜಮೀನಿಗೆ ಸಂಬಂದಿಸಿದಂತೆ ಖಾತೆ ಇದೆ ಎಂದರೆ ಸರಿ. ನಾರಾಯಣಪ್ಪ ನನ್ನ ತಮ್ಮ. ದಾವಾ ಸ್ವತ್ತು ಒತ್ತುವರಿಯಾಗಿದೆಯೋ ಅಥವ ಇಲ್ಲವೋ ಎಂದರೆ ಸಾಕ್ಷಿ ದಾವಾ ಸ್ವತ್ತಿನ ಪೂರ್ತಿ ಸ್ವತ್ತಿನಲ್ಲಿ ನಾವೇ ಸ್ವಾಧೀನಾನುಭವ ಇರುವ ಕಾರಣ ಅಳತೆ ಮಾಡುವ ಪ್ರಶ್ನೆಯೇ ಉದ್ಭವ ಬರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ತಮಗೆ ಸೇರಿದ ಸ್ವತ್ತು ಆಗಿರುವುದಿಲ್ಲ ಆದ ಕಾರಣ ತಾವು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ತಾವು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವ ಬಗ್ಗೆ ತೋರಿಸಲು ಭೂ ಸಾಗುವಳಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯು ಅಂಗವಿಕಲ ಆಗಿರುವ ಕಾರಣ ಅವರಿಗೆ ಸೇರಿದ 2 ಗುಂಟೆ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**